ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ





ಭಾರತದ ಪ್ರಧಾನಮಂತ್ರಿ ಶ್ರೀನರೇಂದ್ರ ಮೋದಿ ಮತ್ತುನೇಪಾಳದ ಪ್ರಧಾನಿ ಶೇರ್ ಬಹಾದೂರ್ ಡೇಬಾ ಇಬ್ಬರೂ ಬುದ್ಧ ಪೂರ್ಣಿಮೆಯ ಸಲುವಾಗಿ ಲುಂಬಿನಿಯ ಮಾಯಾದೇವಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು.


ಸಂಪುಟ : 44 ಸಂಚಿಕೆ : 4 ಶುಭಕೃತ್ – ಜ್ಯೇಷ್ಠ ಕಲಿಯುಗಾಬ್ದ 5124 01-06-2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಈ ವಸುಂಧರೆಯ ಋಣವನ್ನು ನಾವು ಸ್ವಲ್ಪವಾದರೂ ತೀರಿಸದಷ್ಟು ಅಲ್ಪರಾಗಿ ಜೀವಿಸುವುದು ತಪ್ಪಲ್ಲವೇ...?

ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ
ಜೀವರಾಶಿಯನ್ನು ದಾಟಿ ಬಂದ ಈ ಶರೀರ ।
ತಾನಲ್ಲ ತನ್ನದಲ್ಲ ಆಸೆ ಥರವಲ್ಲ ಮುಂದೆ ಬಾಹೋದಲ್ಲ
ದಾಸನಾಗು ವಿಶೇಷನಾಗು ದಾಸನಾಗು ಭವಪಾಶ ನೀಗು ॥

ಸರಿಸುಮಾರು ಹದಿನೈದನೇ ಶತಮಾನದಲ್ಲೇ ದಾಸಶ್ರೇಷ್ಠರಲ್ಲಿ ಒಬ್ಬರಾದ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಒರೆಕೋರೆಗಳನ್ನು ತಿದ್ದುವ ಪ್ರಯತ್ನಮಾಡಿ ಮಹಾನ್ ಹರಿಭಕ್ತರೆನಿಸಿಕೊಂಡವರು, ಅವರ ಕೀರ್ತನೆಯ ಈ ಸಾಲುಗಳಲ್ಲಿ ಮಾನವಜನ್ಮ ಎಷ್ಟು ಶ್ರೇಷ್ಠವಾದದ್ದು ಎಂಬತ್ನಾಲ್ಕು ಲಕ್ಷ ಜೀವ ರಾಶಿಗಳನ್ನು ದಾಟಿ ಇಂದಿನ ನಮ್ಮ ಈ ಶರೀರ ಅಂದರೆ ಈ ಮಾನವಜನ್ಮ ಪಡೆದು ಕೊಂಡಿರುವುದು ಅಂತಹ ಜನ್ಮವನ್ನು ಕ್ಷಣಿಕ ಆಸೆಗಳಿಂದ ಹಾಳುಮಾಡಿಕೊಳ್ಳದೆ ಶ್ರೀಹರಿಯ ಪಾದಗಳಿಗೆ ಶರಣಾಗಿ ಭವದ ಆಸೆಗಳ ಪಾಶದಿಂದ ಮುಕ್ತನಾಗಿ ಸಾರ್ಥಕ್ಯ ಪಡೆಯೋಣ ಎಂದು ಹೇಳುತ್ತಾ ಜೀವನದ ಮಹತ್ವ ತಿಳಿಸಿದ್ದಾರೆ.

ಆದರೆ ಇಂದಿನ ಪರಿಸ್ಥಿಯೇ ಬೇರೆಯಾಗಿದೆ ಎಂಬತ್ನಾಲ್ಕು ಲಕ್ಷ ಜೀವ ರಾಶಿಗಳಲ್ಲಿ ಪ್ರಕೃತಿಯನ್ನ ಕ್ರಮೇಣ ನಾಶಮಾಡುತ್ತಿರುವುದು ಅತೀ ಬುದ್ದಿವಂತಪ್ರಾಣಿ ಎಂದುಕೊಂಡಿರುವ ಮನುಷ್ಯರಾದ ನಾವು ಮಾತ್ರ ಇನ್ನ್ಯಾವುದೇ ಜೀವಿ ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿಲ್ಲ ಎನ್ನುವುದು ಒಪ್ಪಿಕೊಳ್ಳಲೇಬೇಕಾದ ಸತ್ಯ.

ನೆಲ, ಜಲ, ಆಕಾಶ, ಹಸಿರು, ಗಾಳಿ ಹೀಗೆ ಪ್ರಕೃತಿದತ್ತವಾಗಿ ಬಂದಂತಹ ಎಲ್ಲಾ ಸಂಪತ್ತು ಇರುವುದು ನಾನು ಭೋಗಿಸುವುದಕ್ಕಾಗಿ ಎನ್ನುವ ದುರಾಸೆ ಅಥವಾ ಅಹಂಕಾರದ ವರ್ತನೆಯಿಂದ ನಾವು ನಮ್ಮ ಸುತ್ತಲೂ ವಿಶವರ್ತುಲವನ್ನೇ ಸೃಷ್ಟಿಸಿಕೊಂಡು ಆರೋಗ್ಯ ನೆಮ್ಮದಿಗಾಗಿ ಇಲ್ಲದ ಸರ್ಕಸ್ಸ್ ಮಾಡುತಿದ್ದೇವೆ.

ಗಾಳಿಯಲ್ಲೆಲ್ಲಾ ಇಂಗಾಲವನ್ನೇ ತುಂಬಿ ಪ್ರಣಾಯಾಮ ಮಾಡಿದರೇನು ಫಲ? ವಿಷಯುಕ್ತ ಆಹಾರವನ್ನೇ ಸೇವಿಸಿ ಯೋಗ ಮಾಡಿದರೇನು ಫಲ? ನಮ್ಮ ಸುತ್ತಲಿರುವ ಹಸಿರನ್ನು ನದಿ-ತೊರೆ, ಬೆಟ್ಟ-ಗುಡ್ಡಗಳನ್ನು ಪ್ರಾಣಿ-ಪಕ್ಷಿಗಳನ್ನು ಆಪೋಶನ ಮಾಡಿ ನೆಮ್ಮದಿಯ ನಾಳೆಗಳನ್ನು ಹುಡುಕುತ್ತಾ ನಾವು ಹೊರಟಿರುವುದಾದರೂ ಎಲ್ಲಿಗೆ ಆ ಗಮ್ಯವಾದರೂ ಯಾವುದು....?

ಹೀಗೆ ವಾಸ್ತವವನ್ನು ಯೋಚಿಸಿ ಈ ವಿಪರೀತದ ವೈಪರಿತ್ಯ ಓಟವನ್ನು ನಿಲ್ಲಿಸಿ ಮೇಲಿನ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಲೇಬೇಕಾದ ಸಮಯವಿದು.

ಮೊದಲು "ಈ ಸೃಷ್ಟಿ ಒಂದು ಜಡವಸ್ತುವಲ್ಲ ಮಾತೃ ರೂಪಿಯಾಗಿ ನಮ್ಮನ್ನು ಕೊನೆಯವರೆಗೂ ಸಾಕಿ ಸಲಹುವ ದೈವ" ಎನ್ನುವ ಸತ್ಯವನ್ನ ನಮ್ಮ ಮುಂದಿನ ತಲೆಮಾರಿಗೆ ಅರ್ಥಮಾಡಿಸಲೇಬೇಕಾದ ಅನಿವಾರ್ಯವಿದೆ. ಆಗ ಅವರ ಅಂತರ್ಯದಲ್ಲಿ ಈ ಸೃಷ್ಟಿಯ ಬಗ್ಗೆ ಗೌರವಾದರಗಳು ಏರ್ಪಡುತ್ತವೆ. ಭವಿಷ್ಯದಲ್ಲಿ ಅವನು ಸೃಷ್ಟಿವೈವಿದ್ಯತೆಯ ನಡುವೆ ಆನಂದವಾಗಿ ಬದುಕುವ ಮಾರ್ಗ ಹುಡುಕುತ್ತಾನೆ ಮತ್ತು ಮಾರ್ಗದರ್ಶಕನೂ ಆಗುತ್ತಾನೆ. ಈ ಹಿಂದೆ ನಮ್ಮ ಪೂರ್ವಜರು ಹಾಗೇ ಬದುಕಿದ್ದವರು ಪಾಶ್ಚಾತ್ಯದ ವಸ್ತುವಾದ ಮೋಹ ನಮ್ಮದೆಲ್ಲವನ್ನೂ ನಮ್ಮಿಂದ ದೂರಗೊಳಿಸಿತು. ಹಾಗಾಗಿ ಇಂದು ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ ಸಸ್ಯಶ್ಯಾಮಲೆಯಾಗಿ ಗಿರಿಶಿಖರಗಳನ್ನೊತ್ತು ನದಿಸಾಗರಗಳಿಂದ ಸರ್ವಾಲಂಕಾರ ಭೂಷಿತಳಾದ ತಾಯಿಭಾರತಿಯನ್ನು ಜೀವಂತ ಶಕ್ತಿ ಎಂದು ಪರಿಚಯಿಸಬೇಕಿದೆ.

ಹಾಗಾದರೆ ನಮಗೆ ಹಾಲೋಹರ ಉಣಿಸಿ ಬೆಳೆಸಿ ಸುಖದಿಂದ ಕೊನೆಯವರೆಗೂ ಸಲಹುತ್ತಿರುವ ಈ ವಸುಂಧರೆಯ ಋಣವನ್ನು ನಾವು ಸ್ವಲ್ಪವಾದರೂ ತೀರಿಸದಷ್ಟು ಅಲ್ಪರಾಗಿ ಜೀವಿಸುವುದು ತಪ್ಪಲ್ಲವೇ...?

ಒಮ್ಮೆ ಯೋಚಿಸೋಣ ನನ್ನ ಕೊನೆಯುಸಿರಿರುವವರೆಗೂ ನಮ್ಮನ್ನು ಹೊತ್ತು ತಿರುಗುವ ಈ ತಾಯಿಗಾಗಿ ನಾನೇನು ಮಾಡಬಹುದು....?




ವ್ಯಕ್ತಿಗತವಾಗಿ ನಾವೆಲ್ಲಾ ಈ ಮೂರೇ ಮೂರು ಉಪಕ್ರಮಗಳನ್ನು ಪಾಲಿಸಿದರೆ ಸಾಕು.

ಮೊದಲನೆಯದು ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ ಮತ್ತು ಮರುಬಳಕೆ. ಅನವಶ್ಯಕವಾಗಿ ಪ್ಲಾಸ್ಟಿಕ್ ಬಾಟೆಲ್ ಕವರ್‌ಗಳನ್ನು ಖರೀದಿಸದೆ ಬಳಸಿ ಬಿಸಾಡುವ (Use & Throw), ಸಂಸ್ಕೃತಿ ಬಿಟ್ಟುಬಿಡೋಣ. ಅಗತ್ಯವಿದ್ದಲ್ಲಿ ಬಟ್ಟೆಯ ಚೀಲವನ್ನು ಬಳಸೋಣ. ನಮ್ಮ ನೀರು ನಾವೇ ತೆಗೆದುಕೊಂಡು ಹೋಗುವ ಸಣ್ಣ ವಿಚಾರಗಳಿಗೆ ಗಮನ ಕೊಟ್ಟರೆ ಅದೆಷ್ಟೋ ಪ್ಲಾಸ್ಟಿಕ್ ಬಾಟೆಲ್ ಕವರ್‌ಗಳನ್ನು ಭೂಮಿಯ ಅಥವಾ ಗೋಮಾತೆಯ ಗರ್ಭಕ್ಕೆ ಸೇರಿಸುವ ಪಾಪ ಕೃತ್ಯದಿಂದ ನಾವು ದೂರ ಉಳಿಯಬಹುದು. ಇನ್ನೂ ರೈತರೂ ಕಳೆನಿಯಂತ್ರಣಕ್ಕಾಗಿ ಬಳಸುವ ಪ್ಲಾಸ್ಟಿಕ್ ಶೀಟ್ ಬಿಸಿಲು ಗಾಳಿಗೆ ಒಣಗಿ ತುಂಡಾಗಿ ಭೂಮಿಸೇರುತ್ತದೆ. ಇದರ ಬದಲು ಜೀವಂತ ಮುಚ್ಚುಗೆ ಬಳಸುವ ಕಡೆ ಗಮನ ಕೊಟ್ಟರೆ ಭೂಮಿಯ ಫಲವತ್ತತೆ ಹೆಚ್ಚುತ್ತದೆ.

ಎರಡನೆಯದು ನೀರನ್ನು ಉಳಿಸುವುದು. ಹರಿಯುವ ನೀರನ್ನು ನಿಲ್ಲುವಂತೆ, ನಿಂತ ನೀರನ್ನು ಹಿಂಗುವಂತೆ ಮಾಡುವ ಕೆಲಸ ಪ್ರತಿಯೊಬ್ಬರಿಂದ ಆಗಲೇ ಬೇಕಿದೆ. ಭೂಮಿಗೆ ರಂದ್ರಕೊರೆದು ಎಲ್ಲರೂ ನೀರು ಮೇಲೆತ್ತುತ್ತಿದ್ದೇವೆ. ಆದರೆ ಅದನ್ನ ಅಷ್ಟೇ ಶುದ್ಧವಾಗಿ ಅದೇ ಪ್ರಮಾಣದಲ್ಲಿ ವಾಪಸ್ ತುಂಬಿಸುವ ಕೆಲಸ ಆಗುತ್ತಿದೆಯೇ...? ಹಾಗಾಗಿ ನಗರದವರು ಅತೀ ಕಡಿಮೆ ನೀರಿನ ಬಳಕೆ ಮಾಡುವುದು ಅನವಶ್ಯಕ. ನೀರನ್ನು ಪೋಲುಮಾಡದಂತೆ ಎಚ್ಚರಿಕೆ ವಹಿಸಿ ಮಳೆನೀರಿನ ಸಂಗ್ರಹಕ್ಕೆ ಆದ್ಯತೆಕೊಡಬೇಕು. ಕೃಷಿಕರು ಕೃಷಿಹೊಂಡ, ಕೆರೆ-ಕಟ್ಟೆ ಕಾಲುವೆ-ಬಾವಿ, ಹಳ್ಳ-ಕೊಳ್ಳಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡರೆ ಸಾಕು. ಸಕಲ ಜೀವರಾಶಿಗಳ ದಾಹವನ್ನು ತಣಿಸುವ ಶಕ್ತಿ ಆ ಜಲಮೂಲಗಳಿಗಿವೆ.


*4ನೇ ಪುಟಕ್ಕೆ...*


## ಸಣ್ಣ ಪುಟ್ಟದ್ದು ನಾವೇನು ಮಾಡಬಹುದು?

- ಏನಾದರೂ ತರಲು ಅಂಗಡಿಗೆ ಹೊರಡುವಾಗ ಕೈಯಲ್ಲೊಂದು ಚೀಲ ಹಿಡಿದು ಹೊರಟರೆ ಒಂದು ಪ್ಲಾಸ್ಟಿಕ್ ಬ್ಯಾಗ್ ಕಡಿಮೆಯಾದಂತೆ ಅಲ್ಲವೆ?
- ನಮ್ಮನೆಯ ಕಸ ಹೊರಗೆ ಹಾಕುವಾಗ ಹಸಿ ಕಸ ಒಣ ಕಸ ಬೇರೆ ಬೇರೆ ಮಾಡಿಡಬಹುದು!
- ನಾವು ಕುಡಿಯುವ ನೀರಿನ ಬಾಟಲಿಗಳನ್ನು ನಾವೇ ನಮ್ಮ ಜೊತೆ ಕೊಂಡೊಯ್ಯುವುದು.
- ಉಪಯೋಗಿಸಿದ ಪ್ಲಾಸ್ಟಿಕ್ ಕವರ್, ಬಾಟಲಿಗಳನ್ನು ಮತ್ತೆ ಉಪಯೋಗಿಸುವುದು.
- ನಮ್ಮನೆಯ ಹಸಿ ಕಸವನ್ನು ಆದಷ್ಟು ನಮ್ಮ ಮನೆಗೇ ಗೊಬ್ಬರವಾಗಿಸುವುದು.
- ನೀರು ಉಪಯೋಗಿಸುವಾಗ ಆದಷ್ಟೂ ಕಡಿಮೆ ಉಪಯೋಗಿಸುವುದು.
- ಪ್ಲಾಸ್ಟಿಕ್ ಬದಲಿಗೆ ಅನುಕೂಲವಾಗುವ ಪರಿಸರ ಸ್ನೇಹಿ ವಸ್ತುಗಳನ್ನು ಉಪಯೋಗಿಸುವುದು.
- ನಮ್ಮ ಸೋಪು, ಶ್ಯಾಂಪೂ ಮತ್ತಿತರ ಕೆಮಿಕಲ್‌ಗಳ ಮೈಕ್ರೋ ಪ್ಲಾಸ್ಟಿಕ್‌ನ್ನು ಕಡಿತಗೊಳಿಸುವುದು.
- ರೆಫ್ರಿಜಿರೇಟರ್, ಎಸಿ, ಫ್ಯಾನುಗಳನ್ನು ಉಪಯೋಗಿಸದ ಸಂದರ್ಭಗಳಲ್ಲಿ ಬಂದ್ ಮಾಡುವುದು.

ಬರೆಯುತ್ತಾ ಹೋದರೆ ಪಟ್ಟಿ ಉದ್ದವಾದೀತು? ದಿನ ನಿತ್ಯದ ಜೀವನದಲ್ಲಿ ನಮ್ಮ ಸಣ್ಣ ಬದಲಾವಣೆ ಪರಿಸರದ ವಿಚಾರದಲ್ಲಿ ಬಹಳ ಮಹತ್ತರವಾಗುತ್ತದೆ.

## ಸಂಸ್ಮರಣೆ

# ಕೆ.ವಿ. ಅಯ್ಯರ್ (1ನೇ ಆಗಸ್ಟ್, 1894 – 3ನೇ ಜನವರಿ 1980)

ಕನ್ನಡ ನಾಡು ಕಂಡ ಅತ್ಯಂತ ವಿಶೇಷ ವ್ಯಕ್ತಿಗಳಲ್ಲಿ ಪ್ರೊ. ಕೋಲಾರ ವೆಂಕಟೇಶ್ ಅಯ್ಯರ್ ಅವರೂ ಒಬ್ಬರು. ಅವರು ಜನಿಸಿದ್ದು ಜನವರಿ 8, 1894ರಲ್ಲಿ. ಅವರು ವೃತ್ತಿಯಿಂದ ದೈಹಿಕ ಶಿಕ್ಷಣ ತಜ್ಞರಾದರೂ ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದವರು. ಬಾಲ್ಯದಲ್ಲಿ ತೀವ್ರ ಬಡತನ ಅನುಭವಿಸಿದ ಅಯ್ಯರ್ ಅವರು ಒಂದು ಹೊಟೆಲಿನಲ್ಲಿ ದಿನಾಲೂ ದೊಡ್ಡ ದೊಡ್ಡ ರುಬ್ಬುಗುಂಡುಗಳನ್ನು ಬಳಸಿ ಇಡ್ಲಿ, ದೋಸೆ ಹಿಟ್ಟು ರುಬ್ಬುತ್ತಿದ್ದರು.

ಅದರೊಂದಿಗೆ ಅಡುಗೆ ಮನೆಗೆ ಬೇಕಾದ ನೀರನ್ನು ಬಾವಿಯಿಂದ ಸೇದಿ ತರಬೇಕಿತ್ತು. ನಿತ್ಯ ನೂರಾರು, ಭಾರೀ ಗಾತ್ರದ ಕೊಡಗಳಿಂದ ನೀರನ್ನು ಎಳೆದೆಳೆದು, ಹೆಗಲಮೇಲೆ ಹೊತ್ತು ತಂದು ತುಂಬುವುದು ತುಂಬ ಶ್ರಮದ ಕೆಲಸವೇ ಆಗಿತ್ತು. ಈ ಕೆಲಸ ಪ್ರಯಾಸದ್ದಾಗಿದ್ದರೂ ಅವರ ದೇಹದಾರ್ಢ್ಯ ಬೆಳೆಸಲು ಅನುಕೂಲವಾಗಿತ್ತು.



ಛಾಯಾಚಿತ್ರಗಳನ್ನು ತೆಗೆಯುವುದರಲ್ಲಿ ನಿಪುಣರಾದ ಇವರು, ಅಷ್ಟು ಮಾತ್ರವೇ ಅಲ್ಲದೆ ಸ್ವಂತ ವಿದ್ಯುಚ್ಛಕ್ತಿ ಕಾರ್ಯದಲ್ಲಿ, ರೇಡಿಯೋ ರಿಪೇರಿ, ಸ್ವರಲೇಖನ ಯಂತ್ರ ರಿಪೇರಿಯಲ್ಲಿ ನಿಪುಣತೆ ಪಡೆದವರು. ಇವರದ್ದು ಪ್ರಚಂಡ ದೇಹದಾರ್ಢ್ಯ, ಅಪಾರ ಸ್ನಾಯು ನಿಯಂತ್ರಣ, ಸೊಗಸಾದ ಮೈಕಟ್ಟು. ಹೋಟೆಲ್ ಮಾಲೀಕರು ಈ ತರುಣನ ದೇಹ ಶಕ್ತಿ ಗಮನಿಸಿ ಕರೆದೊಯ್ದು ಒಂದು ವ್ಯಾಯಾಮ ಶಾಲೆಗೆ ಸೇರಿಸಿದರು. ಅಲ್ಲಿ ತರಬೇತಿ ಪಡೆದ ತರುವಾಯ ತಮ್ಮದೇ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದ್ದು ಅಯ್ಯರ್ ಅವರ ಸಾಧನೆಯ ಛಲ ತೋರಿಸುತ್ತದೆ.

ಇದರೊಂದಿಗೆ ಸದಾ ಸಾಹಿತಿಗಳೊಡನೆ ಇರುತ್ತಲೇ ತಮ್ಮ ಸಾಹಿತ್ಯ ಸೇವೆ ಮುಂದುವರೆಸಿದ ಅವರು ಶಾಂತಲಾ, ರೂಪದರ್ಶಿ, ಲೀನಾದಂತಹ ಉತ್ತಮ ಕಾದಂಬರಿಗಳನ್ನು, 'ಸಮುದ್ಯತಾ"ದಂತಹ ಕಥಾಸಂಕಲನಗಳನ್ನು ಬರೆದು ಕನ್ನಡದ ಓದುಗರ ಮನೆ ಮನಗಳನ್ನು ಪ್ರವೇಶಿಸಿದರು. ದೈಹಿಕ ಶಿಕ್ಷಣ ಕುರಿತು `Chemical change in Physical Figure', `Physic and Figure', `Surya Namaskar', `Perfect Strength', `How to obtain strength' ಮುಂತಾದ ಕೃತಿಗಳನ್ನು ಬರೆದರು. 1979ರ ವರ್ಷದಲ್ಲಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಸಲ್ಲಿಸಲಾಗಿತ್ತು.

ಬರೆದ ಮೊದಲ ಕತೆ 'ದೆವ್ವದ ಮನೆ' ಕನ್ನಡದಲ್ಲಿ ಹೊಸ ಬಗೆಯ ರಚನೆ. ಚಿತ್ರ ವಿಚಿತ್ರ ಸನ್ನಿವೇಶಗಳು. ತೀವ್ರ ವರ್ಣನೆಯ ಕುತೂಹಲದ ಕತೆ. ಓದುಗರಿಂದ ಪ್ರಶಂಸಾ ಮಹಾಪೂರ. ರೀಡರ್ಸ್ ಡೈಜೆಸ್ಟಿನ ಒಂದು ಪುಟದ ತುಣಿಕಿನಿಂದ ಹೊಳೆದು ಬರೆದ ಕಾದಂಬರಿ 'ರೂಪದರ್ಶಿ'. ಇದರ ಮುಂದುವರೆದ ಭಾಗ 'ಲೀನಾ'. ಪ್ರಸ್ತುತ ಸಮಾಜದ ಅಭಿವ್ಯಕ್ತಿ ಪಡೆದ ಕಾದಂಬರಿ ಎಂಬ ಹೆಗ್ಗಳಿಕೆ. ಮತ್ತೊಂದು ಚಾರಿತ್ರಿಕ ಕಾದಂಬರಿ 'ಶಾಂತಲಾ' ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ರಾಣಿ, ನಾಟ್ಯ ಸರಸ್ವತಿಯ ಕುರಿತ ಕಾದಂಬರಿ.

ಇದಿಷ್ಟೇ ಸಾಲದೆಂಬಂತೆ ಕರ್ನಾಟಕ, ಹಿಂದೂಸ್ತಾನಿ, ಪಾಶ್ಚಾತ್ಯ ಸಂಗೀತ ಕೇಳಿ ಅವುಗಳ ಪ್ರಾಕಾರಗಳಲ್ಲಿ ಸಾಕಷ್ಟು ಪ್ರವೇಶ ಪಡೆದಿದ್ದರು. ವೃತ್ತಿ ರಂಗಭೂಮಿಯ ರಂಗಗೀತೆಗಳು ಅವರಿಗೆ ಕಂಠಪಾಠವಾಗಿರುತ್ತಿದ್ದವು. ಅವರಿಗೆ ಸಿಟ್ಟು ಬರುವುದು ಅಪರೂಪ. ಆದರೆ, ಬಂದರೆ ಮಾತ್ರ ಅವರನ್ನು ಎದುರಿಸುವುದು ಅಸಾಧ್ಯವಾಗಿತ್ತು.

ಒಮ್ಮೆ ಯಾವನೋ ಒಬ್ಬ ಯಾರದೋ ಮಾತು ಕೇಳಿ, ಅಯ್ಯರ್ ಅವರು ತನ್ನನ್ನು ಗುದ್ದಿದರು ಎಂದು ದೂರಿ ಮೊಕದ್ದಮೆ ಹೂಡಿದ. ನ್ಯಾಯಾಲಯದಲ್ಲಿ ತಾವೇ ವಾದ ಮಾಡುವುದಾಗಿ ಹೇಳಿ ಅಲ್ಲಿಗೆ ಹೋಗಿ ದೂರು ಕೊಟ್ಟವನ ಮುಂದೆ ನಿಂತರು. ಆತನೋ ನರಪೇತಲ ನಾರಾಯಣ, ಊದಿದರೆ ಹಾರಿ ಹೋಗುವಂತಿದ್ದಾನೆ.

ಮೊದಲೇ ವಿಸ್ತಾರವಾಗಿದ್ದ ದೇಹವನ್ನು ಇನ್ನಷ್ಟು ಹಿಗ್ಗಿಸಿ ಅವನ ಮುಂದೆ ನಿಂತು, ನಾನು ನಿನ್ನನ್ನು ಗುದ್ದಿರುವುದು ನಿಜವೇ ಎಂದು ಗರ್ಜಿಸಿದರು. ಆತ ಭಯದಿಂದ ನಡುಗುತ್ತ ಹೌದು ಎಂದ.ಆಗ ಅಯ್ಯರ್ ಅವರು, ಹಾಗಾದರೆ ನಾನು ನಿನಗೆ ಈಗ ಒಂದು ಸರಿಯಾದ ಗುದ್ದು ಕೊಡುತ್ತೇನೆ. ಅದನ್ನು ತಾಳಿಕೊಂಡು ಬದುಕಿ ಉಳಿದರೆ ನ್ಯಾಯಾಧೀಶರು ನೀಡುವ ಯಾವ ಶಿಕ್ಷೆಯನ್ನಾದರೂ ಅನುಭವಿಸುತ್ತೇನೆ ಎಂದು ಅವಡುಗಚ್ಚಿ, ಮುಷ್ಟಿ ಬಿಗಿದು ಅವನಡೆಗೆ ಒಂದು ಹೆಜ್ಜೆ ಇಟ್ಟರು. ಆತ ಕುಸಿಯದಿದ್ದದ್ದೇ ಹೆಚ್ಚಿನದು, ತಪ್ಪಾಯಿತು ಸ್ವಾಮಿ, ಯಾರದೋ ಮಾತು ಕೇಳಿ ಈ ಮಣ್ಣು ತಿನ್ನುವ ಕೆಲಸ ಮಾಡಿದೆ. ನಿಮ್ಮ ಕೈ ಗುದ್ದು ತಿಂದು ಬದುಕಿ ಉಳಿಯುವುದು ಸಾಧ್ಯವೇ  ಎಂದು ಕಟಕಟೆಯಿಂದ ಇಳಿದು ಇವರ ಕಾಲಿಗೆ ಬಿದ್ದನಂತೆ. ನ್ಯಾಯಾಧೀಶರು ನಗುತ್ತ ಕೇಸನ್ನು ರದ್ದು ಮಾಡಿದರಂತೆ.


ಇನ್ನೊಮ್ಮೆ ಎತ್ತಿನಗಾಡಿ ಆಯತಪ್ಪಿ ಇವರ ಮನೆಯ ಹತ್ತಿರವಿದ್ದ ಚರಂಡಿಯಲ್ಲಿ ಬಿದ್ದು ಬಿಟ್ಟಿತಂತೆ. ಏದುಸಿರುಬಿಡುತ್ತ ಕಣ್ಣೀರು ಸುರಿಸುತ್ತ ಚರಂಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಎತ್ತನ್ನು ನೋಡಿ ತಮ್ಮ ಮನೆಗೆ ಓಡಿ ಹೋಗಿ ದಪ್ಪನೆಯ ನೀರು ಸೇದುವ ಹಗ್ಗವನ್ನು ತಂದು ಅದಕ್ಕೆ ಸರಿಯಾಗಿ ಕಟ್ಟಿದರು. ನಂತರ ಉಸಿರು ಬಿಗಿಹಿಡಿದು ತಮ್ಮ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಜೈ ಭಜರಂಗ ಬಲಿ ಎಂದು ಎತ್ತನ್ನು ಚರಂಡಿಯಿಂದ ಪೂರ್ತಿ ಮೇಲಕ್ಕೆತ್ತಿ ರಸ್ತೆಯ ಮೇಲೆ ಇಳಿಸಿದರಂತೆ!

ಇಚ್ಛಾಮರಣಿಯಂತೆ ತಾವು ಮೊದಲೇ ಹೇಳಿದ ವರ್ಷ, ತಿಂಗಳು, ವಾರ, ಸಮಯದಂದೇ (3.1.1980) ದೇಹ ಬಿಟ್ಟರು ಅಯ್ಯರ್. ರಾಮಕೃಷ್ಣ ಪರಮಹಂಸರಲ್ಲಿ ಅಪಾರ ಭಕ್ತಿ ಹೊಂದಿದ್ದ ಅಯ್ಯರ್, ತಾವು ಜೀವಮಾನ ಪೂರ್ತಿ ಗಳಿಸಿದ್ದನ್ನು ಶ್ರೀರಾಮಕೃಷ್ಣಾಶ್ರಮಕ್ಕೆ ದಾನ ನೀಡಿದರು.

ಅಯ್ಯರ್‌ರವರು ತಮ್ಮ ಬರಹದ ಬಗ್ಗೆ ಹೇಳಿದ ಮಾತು. ಬರವಣಿಗೆ ನನ್ನ ವೃತ್ತಿಯಲ್ಲ ನನ್ನ ವೃತ್ತಿಯಲ್ಲಿ ಬರವಣಿಗೆಗೆ ಹೆಚ್ಚು ವ್ಯವಧಾನ ಇಲ್ಲ. ಕಾಯಕವೇ ನನ್ನ ಪಾಲಿಗೆ ಬಂದದ್ದು. ಅದೇ ನನಗೆ ಹಸಿವು ನಿದ್ದೆ ಆರೋಗ್ಯಗಳನ್ನು ಕೊಟ್ಟಿದ್ದು. ಅದಕ್ಕೆ ಉಪಾಂಗಗಳಾಗಿ ಬೆಳೆದುಕೊಂಡದ್ದು ವ್ಯಾಯಾಮ ಮತ್ತು ಚಿಕಿತ್ಸಾ ವಿಧಾನ.

ದಿವಂಗತ ಕೈಲಾಸಂರವರು ಹಿಂದೆಯೇ ನನ್ನನ್ನು ಒಮ್ಮೆ ಹೀಗೆಂದು ಎಚ್ಚರಿಸಿದ್ದರು. ದಿನವೂ ಒಂದೆರಡು ಗಂಟೆಗಳ ಕಾಲವಾದರೂ ನಿನ್ನ ವೃತ್ತಿ ವಿಚಾರದ ಪುಸ್ತಕಗಳನ್ನೂ, ವಿದ್ವಾಂಸರು, ವಿಚಾರಶೀಲರೂ, ವಿಜ್ಞಾನಿಗಳು ಬರೆದಿರುವ ಪುಸ್ತಕಗಳನ್ನೂ ಚನ್ನಾಗಿ ಓದು ಎಂದು. 'ಓದುತ್ತೇನೆ' ಎಂದು ಅವರಿಗೆ ಮಾತು ಕೊಟ್ಟಿದ್ದೆ. ಅಂತೆಯೆ ನಡೆದುಕೊಂಡು ಬಂದ್ದಿದ್ದೇನೆ.

ಬಡತನದ ಬೇಗೆಯಲ್ಲಿ ಬೆಂದರೂ ನಿರಾಶರಾಗದೇ, ಹತಾಶೆಯ ಹೊಗೆ ತುಂಬಿಕೊಳ್ಳದೇ, ಜಗತ್ತಿನಲ್ಲಿ ಸುಂದರವಾದದ್ದನ್ನು ದೈಹಿಕ, ಸಾಹಿತ್ಯಿಕ, ಸಂಗೀತದ, ಮಾನವೀಯ ಅನುಕಂಪಗಳನ್ನೆಲ್ಲ ತುಂಬಿಕೊಂಡು ಕೊನೆಗೆ ಯಾವುದೂ ತನ್ನದಲ್ಲವೆಂದು ಸಮರ್ಪಣೆ ಮಾಡಿ ಬದುಕಿದವರು ಅಯ್ಯರ್.




## ಮೋದಿ@20

ಪುಟಗಳು : 458
ಪ್ರಕಾಶಕರು : ರೂಪ ಪಬ್ಲಿಕೇಶನ್ಸ್
ಲೇಖಕರು : ಸಂಕಲನ (ಶ್ರೀಮತಿ ಸುಧಾಮೂರ್ತಿ, ಅಮೀಶ್ ತ್ರಿಪಾಠಿ, ನಂದನ್ ನಿಲೇಕಣಿ ಮತ್ತು 20 ಇತರರು)

ಪುಸ್ತಕ ಪರಿಚಯ

ಪ್ರಧಾನಮಂತ್ರಿ ಶ್ರೀ ನರೇಂದ್ರಮೋದಿ ಅವರು ರಾಜಕೀಯ ಪ್ರವೇಶ ಮಾಡಿ ಇಪ್ಪತ್ತು ವರ್ಷಗಳು ಕಳೆದಿವೆ. 2001ರಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ್ದು ನಂತರದಲ್ಲಿ ನಡೆದಿದ್ದು ಇತಿಹಾಸ. 2014ರಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಅವರ ಅವಧಿಯಲ್ಲಿನ ಸಾಮಾಜಿಕವಾಗಿ, ಆಡಳಿತಾತ್ಮಕವಾಗಿ, ಸಾಂಸ್ಕೃತಿಕವಾಗಿ ನಡೆದ ಅನೇಕ ಬದಲಾವಣೆಗಳ ಕುರಿತಾದ ಆಳವಾದ ವಿಶ್ಲೇಷಣೆಯನ್ನು ಸಮಾಜದ ಅನೇಕ ಮಹತ್ತರ ಸ್ಥಾನಗಳಲ್ಲಿರುವ ಸಾಮಾಜಿಕ ಕಾರ್ಯಕರ್ತರು ಗಣ್ಯರು ನಡೆಸಿದ್ದಾರೆ. ಮೋದಿಯವರ ಆಡಳಿತದ ಅನೇಕ ಆಯಾಮಗಳನ್ನು, ಪಾಲಿಸಿ ಸಂಬಂಧಿಸಿದಂತೆ ಅನೇಕ ವಿಚಾರಗಳ ಚರ್ಚೆಗಳು ಇಲ್ಲಿವೆ.



## ಎಲ್ಲೋ ಕೇಳಿದ ಕಥೆ

ಬಾಹುಬಲಿ ಅನೇಕ ಯುದ್ಧಗಳನ್ನು ಮಾಡಿದ್ದ. ಒಂದು ಹಂತದಲ್ಲಿ, ತನ್ನ ಸ್ವಂತ ಸಹೋದರನ ವಿರುದ್ಧವೇ ಯುದ್ಧ ಮಾಡಬೇಕಾಗಿ ಬಂತು. ಆ ಯುದ್ಧದಲ್ಲಿ ಅನೇಕ ಸೈನಿಕರು ಸಾವನಪ್ಪಿದರು ಮತ್ತು ಯುದ್ಧಭೂಮಿಯ ತುಂಬೆಲ್ಲಾ ಮೃತ ದೇಹಗಳು ಮತ್ತು ರಕ್ತದ ನದಿಯೇ ಹರಿದಿತ್ತು.

ಇದೆಲ್ಲವನ್ನೂ ಕಂಡ ಬಾಹುಬಲಿಗೆ ಆಘಾತವಾಯಿತು. ಅವನೊಳಗೆ ಒಂದು ಪರಿವರ್ತನೆ ಸಂಭವಿಸಿತು. "ನಾನೇಕೆ ಇಷ್ಟೊಂದು ಜೀವಗಳನ್ನು ಬಲಿ ತೆಗೆದುಕೊಂಡೆ?" ಎಂಬ ಪ್ರಶ್ನೆ ಅವನಲ್ಲಿ ಉದ್ಭವಿಸಿತು. ಆದರೆ ಅವನಿಗೆ ಉತ್ತರ ಸಿಗಲಿಲ್ಲ. ಆ ಮರು ಕ್ಷಣವೇ ಅವನು ಯುದ್ಧ ಹಾಗೂ ಅವನು ಮಾಡುತ್ತಿದ್ದ ಎಲ್ಲಾ ಕೆಲಸಗಳನ್ನೂ ತ್ಯಜಿಸಿದ. ತದೇಕಚಿತ್ತನಾಗಿ, ಒಂದು ಇಂಚೂ ಕದಲದಂತೆ, ಬಾಹುಬಲಿ ಹದಿನಾಲ್ಕು ವರ್ಷಗಳ ಕಾಲ ಆಳವಾದ ಧ್ಯಾನದಲ್ಲಿ ಒಂದೇ ಕಡೆ ನಿಂತುಬಿಟ್ಟ. ಆ ಸಾಧನೆಯ ತೀವ್ರತೆಯಿಂದಾಗಿ, ಅವನು ಅಂಟಿಕೊಂಡಿದ್ದಂತಹ ಅನೇಕ ವಿಷಯಗಳಿಂದ ಅವನಿಗೆ ಮುಕ್ತಿ ದೊರೆಯಿತು.

ಇಡೀ ಜಗತ್ತನ್ನೇ ಗೆಲ್ಲಲು ಬಯಸಿದ್ದಂತಹ ಆ ವ್ಯಕ್ತಿ, ಒಂದು ಕತ್ತೆಗೂ ಸಹ ನಮಸ್ಕರಿಸಲು ಸಿದ್ಧನಾಗಿ, ಅಸಾಧಾರಣವಾದ ನಮ್ರತೆಯಿಂದ ನಿಂತನು. ಆದರೆ ಅವನಿಗೆ ಜ್ಞಾನೋದಯವಾಗಲಿಲ್ಲ.

ಆ ಹದಿನಾಲ್ಕು ವರ್ಷಗಳಲ್ಲಿ, ಅವನು ಯಾರ ಬಳಿಯೂ ಒಂದು ಮಾತನ್ನೂ ಸಹ ಆಡಿರಲಿಲ್ಲ ಮತ್ತು ಯಾವುದೇ ಕಾರಣಕ್ಕೂ ತಾನು ನಿಂತ ಜಾಗದಿಂದ ಕದಲಿರಲಿಲ್ಲ. ಆದರೆ ತನಗೇಕೆ ಜ್ಞಾನೋದಯವಾಗಲಿಲ್ಲ ಎನ್ನುವುದು ಅವನಿಗೆ ಅರ್ಥವಾಗಲಿಲ್ಲ. ಆಗ ಆ ದಿಕ್ಕಿನಲ್ಲಿ ನಡೆಯುತ್ತಾ ಬಂದ ಒಬ್ಬ ಯೋಗಿ ಬಾಹುಬಲಿಯನ್ನು ನೋಡಿದ. "ಜ್ಞಾನೋದಯವನ್ನು ಹೊಂದಲು ನಾನಿನ್ನೇನನ್ನು ಮಾಡಬೇಕು?" ಎಂದು ಯೋಗಿಯನ್ನು ಕೇಳಬೇಕೆಂದು ಬಾಹುಬಲಿ ಹಂಬಲಿಸಿದ. ಆದರೆ ಹದಿನಾಲ್ಕು ವರ್ಷಗಳಿಂದ ಮೌನವಾಗಿ ನಿಂತಿದ್ದ ಅವನಿಗೆ ತನ್ನ ಬಾಯಿಯನ್ನು ತೆರೆದು ಪ್ರಶ್ನೆ ಕೇಳುವ ಮನಸ್ಸು ಬರಲಿಲ್ಲ. ಬದಲಾಗಿ ಅವನ ಎಡಗಣ್ಣಿನಿಂದ ಕಣ್ಣೀರಿನ ಹನಿಯೊಂದು ಕೆಳಕ್ಕುರುಳಿತು:

"ನಾನು ನನ್ನ ರಾಜ್ಯವನ್ನು ಬಿಟ್ಟುಕೊಟ್ಟಿದ್ದೇನೆ. ನನ್ನ ಕುಟುಂಬ, ಅರಮನೆ ಮತ್ತು ನನ್ನ ಎಲ್ಲಾ ಸುಖ–ಸೌಕರ್ಯಗಳನ್ನು ತ್ಯಜಿಸಿದ್ದೇನೆ. ಒಂದು ಚಿಕ್ಕ ಕೀಟಕ್ಕೂ ತಲೆಬಾಗುವ ಮಟ್ಟಿಗೆ ನಾನು ಕರಗಿಹೋಗಿದ್ದೇನೆ. ಮಾಡಲು ನನಗಿನ್ನೇನು ಉಳಿದಿದೆ?"

"ನೀನೊಬ್ಬ ಅದ್ಭುತ ಮನುಷ್ಯನಾಗಿ ಮಾರ್ಪಟ್ಟಿದ್ದೀಯ. ಒಂದು ಹುಳ ಅಥವಾ ಕೀಟಕ್ಕೆ ನೀನು ತಲೆಬಾಗಲು ಸಿದ್ಧನಿದ್ದೀಯ, ಆದರೆ ನಿನ್ನ ಸಹೋದರನಿಗೆ ಅದೇ ರೀತಿಯಲ್ಲಿ ನಮಸ್ಕರಿಸಲು ನೀನು ಸಿದ್ಧನಿದ್ದೀಯಾ? ಇಲ್ಲ. ಅದೇ ನಿನ್ನನ್ನು ತಡೆಹಿಡಿದಿರುವುದು" ಎಂದು ಆ ಯೋಗಿ ಹೇಳಿದ.

ಬಾಹುಬಲಿಗೆ ತನ್ನ ಸ್ಥಿತಿಯ ಅರಿವಾಯಿತು. ತನ್ನನ್ನು ಬಂಧಿಸಿದ್ದ ತನ್ನ ಸಹೋದರನ ಮೇಲಿನ ದ್ವೇಷವನ್ನು ಕೈಬಿಟ್ಟ ಮರುಕ್ಷಣವೇ ಆತ್ಮಸಾಕ್ಷಾತ್ಕಾರವನ್ನು ಪಡೆದ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಅಭಿಲಾಷ್ ಪಂಡ್ರಳ್ಳಿ



## ಈದ್ಗಾ ಮಸೀದಿ ತೆರವಿಗೆ ಸಲ್ಲಿಸಲಾದ ಅರ್ಜಿ ಆಲಿಸಲು ಕೋರ್ಟ್ ಒಪ್ಪಿಗೆ

ಜ್ಞಾನವಾಪಿ ಮಸೀದಿ ಸಂಕೀರ್ಣದ ನ್ಯಾಯಾಲಯದ ಆದೇಶದ ವೀಡಿಯೊಗ್ರಫಿ ಸಮೀಕ್ಷೆಯ ಕುರಿತು ನಡೆಯುತ್ತಿರುವ ಚರ್ಚೆಯ ನಡುವೆಯೇ, ಕೃಷ್ಣ ಜನ್ಮಭೂಮಿಯ ಪಕ್ಕದಲ್ಲಿರುವ ಶಾಹಿ ಈದ್ಗಾ ಮಸೀದಿಯ ತೆರವಿಗಾಗಿ ಕೋರಿ ಸಲ್ಲಿಸಲಾದ ಮನವಿಯನ್ನು ಆಲಿಸಲು ಅಲ್ಲಿನ ಸಿವಿಲ್ ನ್ಯಾಯಾಲಯವು ಒಪ್ಪಿಗೆ ನೀಡಿದೆ.

ಮಸೀದಿ ಆವರಣದಲ್ಲಿ 'ಹಿಂದೂ ಕಲಾಕೃತಿಗಳು' ಮತ್ತು 'ಪ್ರಾಚೀನ ಧಾರ್ಮಿಕ ಶಾಸನಗಳು' ಇವೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ವೀಡಿಯೊ ಸಮೀಕ್ಷೆಯನ್ನು ನಡೆಸಬೇಕು ಎಂದು ಅರ್ಜಿಯಲ್ಲಿ ಒತ್ತಾಯಿಸಲಾಗಿದೆ. ಅರ್ಜಿ ವಿಚಾರಣೆಗೆ ನ್ಯಾಯಾಲಯ ಮಾನ್ಯ ಮಾಡಿದೆ. ಕೃಷ್ಣ ಜನ್ಮಭೂಮಿ ಬಳಿಯಿರುವ ಶಾಹಿ ಈದ್ಗಾ ಮಸೀದಿಗೆ ಮೊಹರು ಹಾಕುವ ಮನವಿಯನ್ನು ಕೂಡ ಮಥುರಾ ನ್ಯಾಯಾಲಯವು ಅಂಗೀಕರಿಸಿದೆ.



## ಭಯೋತ್ಪಾದನೆಗೆ ಹಣಕಾಸು: ಯಾಸಿನ್ ಮಲಿಕ್ ದೋಷಿ ಎಂದು NIA ಕೋರ್ಟ್ ತೀರ್ಪು

ಭಯೋತ್ಪಾದನೆಗೆ ಹಣಕಾಸು ಒದಗಿಸಿದ ಪ್ರಕರಣದಲ್ಲಿ ಕಾಶ್ಮೀರಿ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್‌ನ್ನು ದೆಹಲಿಯ ಎನ್‌ಐಎ ನ್ಯಾಯಾಲಯ ಗುರುವಾರ ದೋಷಿ ಎಂದು ಘೋಷಿಸಿದೆ. ಶಿಕ್ಷೆಯ ಪ್ರಮಾಣದ ವಿಚಾರಣೆಯು ಮೇ 25 ರಂದು ನಡೆಯಲಿದೆ.

ವಿಶೇಷ ನ್ಯಾಯಾಧೀಶ ಪ್ರವೀಣ್ ಸಿಂಗ್ ಅವರು ವಿಧಿಸಬೇಕಾದ ದಂಡದ ಮೊತ್ತವನ್ನು ನಿರ್ಧರಿಸಲು ಮಲಿಕ್ ಅವರ ಆರ್ಥಿಕ ಪರಿಸ್ಥಿತಿಯನ್ನು ನಿರ್ಣಯಿಸಲು ಎನ್‌ಐಎ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಮತ್ತು ಶಿಕ್ಷೆಯ ಪ್ರಮಾಣವನ್ನು ಮೇ 25ಕ್ಕೆ ಮುಂದೂಡಿದ್ದಾರೆ.

ವಿಚಾರಣೆಯ ಮುಂದಿನ ದಿನಾಂಕದೊಳಗೆ ತನ್ನ ಹಣಕಾಸು, ಆಸ್ತಿಗಳ ಬಗ್ಗೆ ಅಫಿಡವಿಟ್ ಸಲ್ಲಿಸುವಂತೆ ನ್ಯಾಯಾಲಯವು ಮಲಿಕ್‌ಗೆ ಸೂಚಿಸಿದೆ. ಸೆಕ್ಷನ್ 16 (ಭಯೋತ್ಪಾದನಾ ಕೃತ್ಯ), 17 (ಭಯೋತ್ಪಾದಕ ಕೃತ್ಯಕ್ಕೆ ಹಣ ಸಂಗ್ರಹಿಸುವುದು), 18 (ಭಯೋತ್ಪಾದಕ ಕೃತ್ಯಕ್ಕೆ ಪಿತೂರಿ) ಮತ್ತು 20 (ಭಯೋತ್ಪಾದಕ ಗುಂಪಿನ ಸದಸ್ಯ), 120-B (ಅಪರಾಧದ ಪಿತೂರಿ) ಮತ್ತು 124–A (ದೇಶದ್ರೋಹ)ದ ಪ್ರಕರಣವನ್ನು ಆತನ ಮೇಲೆ ಹೊರಿಸಲಾಗಿದೆ. ಮಲಿಕ್ 2019 ರಿಂದ ದೆಹಲಿಯ ತಿಹಾರ್ ಜೈಲಿನಲ್ಲಿದ್ದಾನೆ.



## ಸೈಬರ್ ಭದ್ರತಾ ಸವಾಲುಗಳನ್ನು ಎದುರಿಸಲು 2019–20ರಲ್ಲಿ 809 ಕೋಟಿ ರೂ ವ್ಯಯ

ಕೇಂದ್ರ ಸರ್ಕಾರವು ಸುರಕ್ಷತೆ ಮತ್ತು ನಂಬಿಕೆಯ ವಾತಾವರಣವನ್ನು ಸೃಷ್ಟಿಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಮತ್ತು ಆನ್‌ಲೈನ್‌ನಲ್ಲಿ ಸೈಬರ್ ಭದ್ರತೆಯನ್ನು ಪರಿಹರಿಸಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ. ನವದೆಹಲಿಯಲ್ಲಿ ಸೈಬರ್ ಭದ್ರತಾ ನಿರ್ದೇಶನಗಳ ಕುರಿತು ಪದೇ ಪದೇ ಕೇಳಲಾಗುವ ಪ್ರಶ್ನೆಗಳ ದಾಖಲೆಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸೈಬರ್ ಭದ್ರತಾ ಸವಾಲುಗಳನ್ನು ಎದುರಿಸಲು 2019 ರಿಂದ 2020ರವರೆಗೆ 809 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮೂಲ ಸೌಕರ್ಯ ಜಾಗೃತಿ, ಉಪಕರಣಗಳು ಮತ್ತು ಸೈಬರ್ ಸ್ವಚ್ಛತಾ ಕೇಂದ್ರಗಳನ್ನು ಪರಿಹರಿಸಲು 2022–23ಕ್ಕೆ ಇನ್ನೂ 515 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಆನ್‌ಲೈನ್ ಸುರಕ್ಷತೆ, ನಂಬಿಕೆ ಮತ್ತು ಹೊಣೆಗಾರಿಕೆಯನ್ನು ಖಾತರಿಪಡಿಸುವುದು ಸರ್ಕಾರದ ಪ್ರಮುಖ ಉದ್ದೇಶಗಳಾಗಿವೆ ಎಂದು ಸಚಿವರು ಹೇಳಿದರು.

## ಪಿಎಂ ಗತಿಶಕ್ತಿಯಡಿ 400 ಸಮಗ್ರ ಜಿಐಎಸ್ ಆಧಾರಿತ ನಕ್ಷೆಗಳು ಸಿದ್ಧ: ಗೋಯಲ್

ಪ್ರಧಾನ ಮಂತ್ರಿ ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅಡಿಯಲ್ಲಿ ಸುಮಾರು 400 ಸಮಗ್ರ ಜಿಐಎಸ್ ಆಧಾರಿತ ನಕ್ಷೆಗಳನ್ನು ಈಗಾಗಲೇ ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಹೇಳಿದ್ದಾರೆ.

# ಸಾಲುದ್ದದ ಸುದ್ದಿಗಳು



ನವದೆಹಲಿಯಲ್ಲಿ ನಡೆದ ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ–ಟ್ರಾಯ್‌ನ ಅಧಿವೇಶನದಲ್ಲಿ ಪ್ರಧಾನ ಭಾಷಣ ಮಾಡಿದ ಗೋಯಲ್, ಗತಿಶಕ್ತಿ ಉಪಕ್ರಮವು ದೇಶದಲ್ಲಿ ಮೂಲಸೌಕರ್ಯಗಳ ಅವ್ಯವಸ್ಥಿತ ಅಭಿವೃದ್ಧಿಯ ಸಮಸ್ಯೆಯನ್ನು ಪರಿಹರಿಸಲು ಸಹಾಯ ಮಾಡುತ್ತದೆ ಮತ್ತು ಮೂಲಸೌಕರ್ಯ ಯೋಜನೆಯಲ್ಲಿ ಸುರಕ್ಷಿತ, ಸುಸ್ಥಿರ ಮತ್ತು ಸಹಕಾರಿ ವಿಧಾನ ತರುತ್ತದೆ ಎಂದಿದ್ದಾರೆ. ದೇಶವು ಸ್ವಾತಂತ್ರ್ಯದ 75 ವರ್ಷಗಳನ್ನು ಪೂರೈಸಿದ ಆಜಾದಿ ಕಾ ಅಮೃತ್ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರದ ಸೇವೆಯಲ್ಲಿ 25 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಸಚಿವರು ಟ್ರಾಯ್‌ಯನ್ನು ಅಭಿನಂದಿಸಿದರು

ಕಳೆದ ಕೆಲವು ವರ್ಷಗಳಲ್ಲಿ ಟೆಲಿಕಾಂ ವಲಯವು ಸಾಧಿಸಿದ ಗಮನಾರ್ಹ ಪ್ರಗತಿಯ ಬಗ್ಗೆ, ವಿಶೇಷವಾಗಿ ಡಿಜಿಟಲ್ ವಿಭಜನೆಯನ್ನು ಕಡಿಮೆ ಮಾಡುವಲ್ಲಿ, ಮಾಹಿತಿ ತಂತ್ರಜ್ಞಾನ ಮತ್ತು ಕೊನೆಯ ಮೈಲಿ ಡಿಜಿಟಲ್ ಸಂಪರ್ಕವು ಪ್ರತಿಯೊಂದು ವಲಯದ ಮೇಲೆ ಪ್ರಭಾವ ಬೀರುತ್ತದೆ ಮತ್ತು ಭಾರತದ ಅಡಿಪಾಯವಾಗಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು. ಮುಂಬರುವ ವರ್ಷಗಳಲ್ಲಿ ಡಿಜಿಟಲ್ ಇಂಡಿಯಾ ಆತ್ಮನಿರ್ಭರ ಭಾರತಕ್ಕೆ ಅಡಿಪಾಯವನ್ನು ರೂಪಿಸುತ್ತದೆ ಎಂದು ಅವರು ಹೇಳಿದರು.

## ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್: ಭಾರತದ ನಿಖತ್ ಜರೀನ್ಗೆ ಚಿನ್ನ

ಗುರುವಾರ ಟರ್ಕಿಯ ಇಸ್ತಾನ್ಬುಲ್‌ನಲ್ಲಿ ನಡೆದ ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನ 52 ಕೆಜಿ ವಿಭಾಗದ ಫ್ಲೈ–ವೇಟ್ ಫೈನಲ್‌ನಲ್ಲಿ ಭಾರತದ ನಿಖತ್ ಜರೀನ್ ಅವರು ಥಾಯ್ಲೆಂಡ್‌ನ ಜಿಟ್ಪಾಂಗ್ ಜುಟಾಮಾಸ್ ವಿರುದ್ಧ ಜಯಗಳಿಸುವ ಮೂಲಕ ಚಿನ್ನದ ಪದಕ ಗೆದ್ದರು. ಈ ಮೂಲಕ ನಿಖತ್ ಅವರು ಮೇರಿ ಕೋಮ್, ಸರಿತಾ ದೇವಿ, ಜೆನ್ನಿ ಆರ್‌ಎಲ್ ಮತ್ತು ಲೇಖಾ ಕೆಸಿ ನಂತರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಚಿನ್ನ ತಂದು ಕೊಟ್ಟ ಐದನೇ ಭಾರತೀಯ ಮಹಿಳಾ ಬಾಕ್ಸರ್ ಆಗಿ ಹೊರಹೊಮ್ಮಿದ್ದಾರೆ.




25 ವರ್ಷದ ಜರೀನ್ ಮಾಜಿ ಜೂನಿಯರ್ ಯೂತ್ ವಿಶ್ವ ಚಾಂಪಿಯನ್. ಫೈನಲ್‌ನಲ್ಲಿ ಥಾಯ್ಲೆಂಡ್ ಎದುರಾಳಿ ವಿರುದ್ಧ ನಿಖತ್ ಅಮೋಘ ಹೋರಾಟ ನಡೆಸಿ ಚಿನ್ನದ ಪದಕ ತಂದುಕೊಟ್ಟರು. ಈಕೆ ಭಾರತದ ಪರವಾಗಿ 30–27, 29–28, 29–28, 30–27, 29–28 ಅಂಕಗಳನ್ನು ಗಳಿಸಿದ್ದಾರೆ.

ತೆಲಂಗಾಣ ಮೂಲದ ನಿಖತ್ ಆರು ಬಾರಿಯ ಚಾಂಪಿಯನ್ ಮೇರಿ ಕೋಮ್ (2002, 2005, 2006, 2008, 2010 ಮತ್ತು 2018), ಸರಿತಾ ದೇವಿ (2006) ನಂತರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ ಏಕೈಕ ಐದನೇ ಭಾರತೀಯ ಮಹಿಳೆಯಾಗಿದ್ದಾರೆ. ನಿಖತ್ ಹೊರತುಪಡಿಸಿ, ಇಬ್ಬರು ಭಾರತೀಯ ಬಾಕ್ಸರ್‌ಗಳಾದ ಮನೀಶಾ ಮೌನ್ 57 ಕೆಜಿಯಲ್ಲಿ ಮತ್ತು 63 ಕೆಜಿ ವಿಭಾಗದಲ್ಲಿ ಪರ್ವೀನ್ ಹೂಡಾ ಅವರು ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

## ಇದೇ ಮೊದಲು: ಪ್ರಯಾಣಿಕ ರೈಲಿನಲ್ಲಿ ಬಸ್ ಸಾಗಾಣೆ ನಡೆಸಿದ ರೈಲ್ವೆ

ಭಾರತೀಯ ರೈಲ್ವೆಯು ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಬಸ್‌ಗಳನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬೇರೊಂದು ರಾಜ್ಯಕ್ಕೆ ರವಾನಿಸುವ ಮಹತ್ವದ ಯೋಜನೆಯನ್ನು ಆರಂಭಿಸಿದೆ. ಬೆಂಗಳೂರಿನ ದೊಡ್ಡಬಳ್ಳಾಪುರದಿಂದ ಚಂಡೀಗಢಕ್ಕೆ ಮೊದಲ ಬಾರಿಗೆ ಪ್ರಯಾಣಿಕರ ಬಸ್‌ಗಳನ್ನು ರೈಲಿನ ಮೂಲಕ ಸಾಗಿಸಲಾಗುತ್ತಿದೆ. ಈ ಮೂಲಕ ಭಾರತೀಯ ರೈಲ್ವೆ ಸರಕು ಸಾಗಣೆಯ ಹೊಸ ಉಪಕ್ರಮಕ್ಕೆ ಮುಂದಾಗಿದೆ ಎಂದು ಹೇಳಿದೆ.

ಈ ಸಂಬಂಧ ವಿಡಿಯೋವೊಂದನ್ನು ರೈಲ್ವೆ ಬಿಡುಗಡೆ ಮಾಡಿದ್ದು, ಇದರಲ್ಲಿ ಹಿಮಾಚಲ ರಸ್ತೆ ಸಾರಿಗೆ ಸಂಸ್ಥೆಯ ಬಳಕೆಗಾಗಿ ಬೆಂಗಳೂರಿನ ದೊಡ್ಡಬಳ್ಳಾಪುರದಿಂದ ಚಂಡೀಗಢಕ್ಕೆ ಅಶೋಕ್ ಲೇಲ್ಯಾಂಡ್ ಬಸ್‌ಗಳನ್ನು ರೈಲಿನ ಮೂಲಕ ಸಾಗಿಸುತ್ತಿರುವುದನ್ನು ನಾವು ಕಾಣಬಹುದು.



## ಚೆನ್ನೈನಿಂದ ಶ್ರೀಲಂಕಾಗೆ ಹೊರಟ ಆಹಾರ ಸಾಮಾಗ್ರಿ ಹೊತ್ತ ಹಡಗು

ಶ್ರೀಲಂಕಾಕ್ಕೆ ತಮಿಳುನಾಡು ಸರ್ಕಾರ ಘೋಷಿಸಿದಂತೆ ಪರಿಹಾರ ಸಾಮಗ್ರಿಗಳನ್ನು ಹೊತ್ತ ಮೊದಲ ಹಡಗು ನಿನ್ನೆ ಹೊರಟಿದೆ. ಇದಕ್ಕೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಚಾಲನೆ ನೀಡಿದರು. ರವಾನಿಸಲಾದ ಪರಿಹಾರ ಸಾಮಗ್ರಿಗಳಲ್ಲಿ ಒಂಬತ್ತು ಸಾವಿರ ಟನ್ ಅಕ್ಕಿ, 200 ಟನ್ ಹಾಲಿನ ಪುಡಿ ಮತ್ತು 24 ಮೆಟ್ರಿಕ್ ಟನ್ ಅಗತ್ಯ ಔಷಧಗಳು ಸೇರಿವೆ. ಆರ್ಥಿಕ ಒತ್ತಡದಲ್ಲಿ ತತ್ತರಿಸುತ್ತಿರುವ ನೆರೆಯ ರಾಷ್ಟ್ರದ ಸಾರ್ವಜನಿಕರಿಗೆ ಸಹಾಯ ಮಾಡಲು ಇವುಗಳನ್ನು ಕಳುಹಿಸಲಾಗುತ್ತಿದೆ.

ವರದಿಯ ಪ್ರಕಾರ, ಕೊಲಂಬೊಗೆ ತೆರಳುತ್ತಿರುವ ಪರಿಹಾರ ಸಾಮಗ್ರಿಗಳು ತಮಿಳುನಾಡು ಸರ್ಕಾರವು ಶ್ರೀಲಂಕಾಗೆ ಕಳುಹಿಸಿಕೊಡಲು ನಿರ್ಧರಿಸಿರುವ 40 ಸಾವಿರ ಮೆಟ್ರಿಕ್ ಟನ್ ಅಕ್ಕಿ, 500 ಮೆಟ್ರಿಕ್ ಟನ್ ಹಾಲಿನ ಪುಡಿ ಮತ್ತು ಜೀವರಕ್ಷಕಗಳ ಮೊದಲ ಭಾಗವಾಗಿದೆ. ರಾಜ್ಯ ಮತ್ತು ಕೇಂದ್ರದ ನಡುವಿನ ನಿಕಟ ಸಮನ್ವಯದೊಂದಿಗೆ ಮೊದಲ ಬ್ಯಾಚ್ ರವಾನೆ ಆಹಾರ ಸಾಮಾಗ್ರಿ ರವಾನೆ ಮಾಡಲಾಗಿದೆ.



## ಆನ್‌ಲೈನ್‌ನಲ್ಲಿ ಸಮಗ್ರ ದೇಗುಲ ಮಾಹಿತಿ ವ್ಯವಸ್ಥೆ ಆರಂಭಿಸಲಿದೆ ಯುಪಿ

ಉತ್ತರಪ್ರದೇಶದ ಯೋಗಿ ಆದಿತ್ಯನಾಥ ಸರ್ಕಾರವು ಪ್ರವಾಸಿಗರ ಅನುಕೂಲಕ್ಕಾಗಿ ರಾಜ್ಯದ ಎಲ್ಲಾ ದೇವಾಲಯಗಳ ವಿವರಣೆ, ವಿವರಗಳು ಮತ್ತು ಇತಿಹಾಸ ಮತ್ತು ಅವುಗಳ ಮಾರ್ಗಗಳ ನಕ್ಷೆಗಳನ್ನು ಒಳಗೊಂಡಿರುವ ಸಮಗ್ರ ದೇವಾಲಯ ಮಾಹಿತಿ ವ್ಯವಸ್ಥೆಯನ್ನು ಆನ್‌ಲೈನ್‌ನಲ್ಲಿ ಅಭಿವೃದ್ಧಿಪಡಿಸಲು ಸಿದ್ಧವಾಗಿದೆ. ಧಾರ್ಮಿಕ ವ್ಯವಹಾರಗಳ ಇಲಾಖೆಯು ಈಗಾಗಲೇ ಯುಪಿ ಎಲೆಕ್ಟ್ರಾನಿಕ್ಸ್ ಕಾರ್ಪೊರೇಶನ್ ವ್ಯವಸ್ಥಾಪಕ ನಿರ್ದೇಶಕರನ್ನು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಮತ್ತು ಮುಂದಿನ ಆರು ತಿಂಗಳಲ್ಲಿ ದೇವಾಲಯಗಳ ಕುರಿತ ವಿವರಗಳನ್ನು ಅಪ್ಲೋಡ್ ಮಾಡಲು ಸೂಚಿಸಿದೆ. ಈ ಉದ್ದೇಶಕ್ಕಾಗಿ ಹಣಕಾಸು ಇಲಾಖೆಯಿಂದ ಒಂದು ಕೋಟಿ ರೂ.ಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರದ ವಕ್ತಾರರ ಪ್ರಕಾರ, ಧಾರ್ಮಿಕ ವ್ಯವಹಾರಗಳ ಇಲಾಖೆಯು 2022–23ರ ಆರ್ಥಿಕ ವರ್ಷದಲ್ಲಿ ಇಲಾಖಾ ಕಾಮಗಾರಿಗಳಿಗೆ 1000 ಕೋಟಿ ರೂಪಾಯಿಗಳ ಬೃಹತ್ ಬಜೆಟ್‌ನ್ನು ಪ್ರಸ್ತಾಪಿಸಿದೆ.

ಮುಂದಿನ 100 ದಿನಗಳಲ್ಲಿ ಕಾಶಿ ವಿಶ್ವನಾಥ ಕಾರಿಡಾರ್ ಪೂರಕ ಯೋಜನೆಯಲ್ಲಿ ಕೆಲಸ ಮಾಡಲು ಸರ್ಕಾರ ಮುಂದಾಗಿದೆ. ಇಲಾಖೆಯು ಗಾಜಿಯಾಬಾದ್‌ನಲ್ಲಿ ಕೈಲಾಸ ಮಾನಸ ಸರೋವರ ಭವನವನ್ನು ನಿರ್ಮಿಸಲು ಯೋಜಿಸಿದೆ ಮತ್ತು 934.46 ಲಕ್ಷ ರೂಪಾಯಿ ವೆಚ್ಚದಲ್ಲಿ ವೇದ ವಿಜ್ಞಾನ ಕೇಂದ್ರದ ಎರಡನೇ ಹಂತದ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಿದೆ. ಇದಲ್ಲದೆ, ವಯೋವೃದ್ಧ ಸಂತರು ಮತ್ತು ಅರ್ಚಕರ ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕಾಗಿ ಮುಂದಿನ ಒಂದೆರಡು ವರ್ಷಗಳಲ್ಲಿ ಮಂಡಳಿಯನ್ನು ರಚಿಸಲು ಸರ್ಕಾರ ಯೋಜಿಸಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MAY 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-06-2022





## ಯೋಗ ಮಾರ್ಗ, ಆಯುರ್ವೇದ ಶಕ್ತಿಯನ್ನು ಇಡೀ ಮಾನವಕುಲಕ್ಕೆ ಭಾರತ ತೋರಿಸುತ್ತಿದ್ದೇವೆ: ಮೋದಿ

ಜಾಗತಿಕ ಪ್ರಕ್ಷುಬ್ಧತೆಯ ನಡುವೆಯೂ ಭಾರತ ಇಂದು ವಿಶ್ವದ ಹೊಸ ಆಶಾಕಿರಣವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ವಡೋದರಾದ ಎರಡು ಸ್ವಾಮಿನಾರಾಯಣ ದೇವಸ್ಥಾನಗಳು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಆಯೋಜಿಸಿದ್ದ ಯುವ ಶಿವಿರ್ ಅನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಇಂದು ನಾವು ನವ ಭಾರತವನ್ನು ನಿರ್ಮಿಸಲು ಪ್ರಯತ್ನಗಳನ್ನು ಮಾಡಲು ಸಾಮೂಹಿಕ ಸಂಕಲ್ಪವನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು.

ಜಾಗತಿಕ ಅಶಾಂತಿ ಮತ್ತು ಘರ್ಷಣೆಗಳ ನಡುವೆ ಶಾಂತಿಯ ಹೊಸ ಭರವಸೆಯೊಂದಿಗೆ ಜಗತ್ತು ಭಾರತದತ್ತ ನೋಡುತ್ತಿದೆ. ಹೊಸ ಭಾರತವು ಹೊಸ ಗುರುತನ್ನು ಹೊಂದಿದೆ ಮತ್ತು ಪ್ರಾಚೀನ ಸಂಪ್ರದಾಯಗಳೊಂದಿಗೆ ಮುಂದಕ್ಕೆ ನೋಡುತ್ತಿದೆ. ಇಂತಹ ನವ ಭಾರತ ಇಡೀ ಮನುಕುಲಕ್ಕೆ ದಿಕ್ಕು ತೋಚದಂತಾಗಿದೆ ಎಂದರು.

ನಾವು ಯೋಗದ ಮಾರ್ಗವನ್ನು ಮತ್ತು ಆಯುರ್ವೇದದ ಶಕ್ತಿಯನ್ನು ಇಡೀ ಮಾನವಕುಲಕ್ಕೆ ತೋರಿಸುತ್ತಿದ್ದೇವೆ. ಸಾಫ್ಟ್‌ವೇರ್‌ನಿಂದ ಬಾಹ್ಯಾಕಾಶಕ್ಕೆ ಹೊಸ ಭವಿಷ್ಯವನ್ನು ಎದುರು ನೋಡುತ್ತಿರುವ ರಾಷ್ಟ್ರವಾಗಿ ನಾವು ಹೊರಹೊಮ್ಮುತ್ತಿದ್ದೇವೆ. ಕೊರೋನಾ ಬಿಕ್ಕಟ್ಟಿನ ನಡುವೆ ಜಗತ್ತಿಗೆ ಲಸಿಕೆಗಳು ಮತ್ತು ಔಷಧಿಗಳನ್ನು ತಲುಪಿಸುವ ಮೂಲಕ, ಚದುರಿದ ಪೂರೈಕೆ ಸರಪಳಿಗಳ ನಡುವೆ ಸ್ವಾವಲಂಬಿ ಭಾರತದ ಭರವಸೆಯನ್ನು ನಾವು ಸೃಷ್ಟಿಸಿದ್ದೇವೆ ಎಂದು ಮೋದಿ ಹೇಳಿದರು.

ಈ ಸಂಸ್ಕಾರ ಅಭ್ಯುದಯ ಶಿಬಿರವನ್ನು ಆಯೋಜಿಸಿದ್ದಕ್ಕಾಗಿ ಸ್ವಾಮಿನಾರಾಯಣ ದೇವಾಲಯಗಳು ಮತ್ತು ಅವರ ಸಂತರನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಇದು ನಮ್ಮ ಸಂಸ್ಕೃತಿ ಮತ್ತು ನಮ್ಮ ರಾಷ್ಟ್ರಕ್ಕೆ ಅಭ್ಯುದಯವನ್ನು ತರುತ್ತದೆ ಎಂದು ಹೇಳಿದರು. ರಾಷ್ಟ್ರವೇ ಆಜಾದಿ ಕಾ ಅಮೃತ್ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಈ ಶಿಬಿರವನ್ನು ಆಯೋಜಿಸುತ್ತಿರುವುದು ವಿಶೇಷ ಎಂದರು.

## ಗ್ಯಾನವಾಪಿ ಮಸೀದಿ ಕೊಳದಲ್ಲಿ ಶಿವಲಿಂಗ ಪತ್ತೆ: ಸ್ಥಳ ನಿರ್ಬಂಧಿಸಲು ಆದೇಶ



ವಿಡಿಯೋ ಸಮೀಕ್ಷೆಗ ಒಳಪಟ್ಟಿರುವ ಗ್ಯಾನವಾಪಿ ಮಸೀದಿಯಲ್ಲಿ ಮಹತ್ವದ ಸುಳಿವುಗಳು ಸಿಗುತ್ತಿವೆ. ಮಸೀದಿ ಆವರಣದಲ್ಲಿನ ಕೊಳದಲ್ಲಿ ಶಿವಲಿಂಗ ಪತ್ತೆಯಾಗಿದೆ. ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಗ್ಯಾನವಾಪಿ ಮಸೀದಿ ಸಂಕೀರ್ಣದ ಮೂರು ದಿನಗಳ ವೀಡಿಯೋಗ್ರಾಫಿ ಸಮೀಕ್ಷೆಯು ನ್ಯಾಯಾಲಯದಲ್ಲಿ ಮುಂದಿನ ವಿಚಾರಣೆಗೆ ಒಂದು ದಿನ ಮುಂಚಿತವಾಗಿ ಕೊನೆಗೊಂಡಿದೆ.

ಮಸೀದಿ ಸಂಕೀರ್ಣದ ಒಳಗಿರುವ ಕೊಳದಲ್ಲಿ ಶಿವಲಿಂಗ ಕಂಡುಬಂದಿದೆ ಎಂದು ವಕೀಲರೊಬ್ಬರು ಹೇಳಿದ್ದಾರೆ. "ಕೊಳವನ್ನು ಶುದ್ಧೀಕರಣ ಆಚರಣೆಗಳಿಗೆ ಬಳಸಲಾಗುತ್ತಿತ್ತು. ಕೊಳದಿಂದ ನೀರನ್ನು ಬತ್ತಿಸಿದಾಗ ಶಿವಲಿಂಗವು ಕಂಡುಬಂದಿದೆ" ಎಂದು ವಕೀಲ ಸುಭಾಷ್ ನಂದನ್ ಚತುರ್ವೇದಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ವಾರಣಾಸಿಯ ನ್ಯಾಯಾಲಯವು ಗ್ಯಾನವಾಪಿ ಮಸೀದಿ ಸಂಕೀರ್ಣದಲ್ಲಿನ ಕೊಳವನ್ನು ವಶಪಡಿಸಿಕೊಳ್ಳಲು ಆದೇಶಿಸಿದೆ. ಸಂಕೀರ್ಣದ ಬಳಿ ಬಿಗಿ ಭದ್ರತೆ ಮತ್ತು ನಿರ್ಬಂಧಗಳ ನಡುವೆ ಅಂದು ಬೆಳಿಗ್ಗೆ ಕೊನೆಯ ದಿನದ ಚಿತ್ರೀಕರಣ ಪ್ರಾರಂಭವಾಯಿತು.

## ಜೈವಿಕ ಇಂಧನ ನೀತಿಗೆ ತಿದ್ದುಪಡಿ ತರಲು ಕೇಂದ್ರ ಸಂಪುಟ ಅನುಮೋದನೆ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಪೆಟ್ರೋಲ್‌ನಲ್ಲಿ ಶೇಕಡಾ 20 ರಷ್ಟು ಎಥೆನಾಲ್‌ನನ್ನು ಮಿಶ್ರಣ ಮಾಡುವ ಗುರಿಯನ್ನು 2025–26ಕ್ಕೆ ಐದು ವರ್ಷಗಳವರೆಗೆ ಮುಂದುವರಿಸಲು ಮತ್ತು ದೇಶದ ಇಂಧನ ಅಗತ್ಯಗಳನ್ನು ಪೂರೈಸಲು ಆಮದು ಮಾಡಿಕೊಂಡ ತೈಲದ ಮೇಲೆ ಅವಲಂಬನೆಯನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ಜೈವಿಕ ಇಂಧನ ಉತ್ಪಾದನೆಗೆ ಹೆಚ್ಚಿನ ಫೀಡ್‌ಸ್ಟಾಕ್‌ಗಳನ್ನು ಅನುಮತಿಸಲು ಅನುಮೋದನೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು ಜೈವಿಕ ಇಂಧನಗಳ ರಾಷ್ಟ್ರೀಯ ನೀತಿ – 2018ರ ತಿದ್ದುಪಡಿಗಳಿಗೆ ಅನುಮೋದನೆ ನೀಡಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ. 2030 ರಿಂದ 2025–26ಕ್ಕೆ ಪೆಟ್ರೋಲ್‌ನಲ್ಲಿ (ಶೇ. 20 ಎಥೆನಾಲ್, 80 ಪ್ರತಿಶತ ಪೆಟ್ರೋಲ್) 20 ಪ್ರತಿಶತ ಎಥೆನಾಲ್‌ನನ್ನು ಮಿಶ್ರಣ ಮಾಡುವ ಗುರಿಯನ್ನು ಸಾಧಿಸುವುದು ಮುಖ್ಯ ತಿದ್ದುಪಡಿಯಾಗಿದೆ. ಪ್ರಸ್ತುತ, ಸುಮಾರು 10 ಪ್ರತಿಶತ ಎಥೆನಾಲ್‌ನನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡಲಾಗುತ್ತಿದೆ.




ವಿಶೇಷ ಆರ್ಥಿಕ ವಲಯಗಳಲ್ಲಿ (SEZ) / ರಫ್ತು ಆಧಾರಿತ ಘಟಕಗಳಲ್ಲಿ (EoUs) ಇರುವ ಘಟಕಗಳಿಂದ ಮೇಕ್–ಇನ್–ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ದೇಶದಲ್ಲಿ ಜೈವಿಕ ಇಂಧನ ಉತ್ಪಾದನೆಯನ್ನು ಉತ್ತೇಜಿಸಲು ತಿದ್ದುಪಡಿಗಳನ್ನು ಮಾಡಲಾಗುತ್ತಿದೆ. ನಿರ್ದಿಷ್ಟ ಸಂದರ್ಭಗಳಲ್ಲಿ ಜೈವಿಕ ಇಂಧನ ರಫ್ತಿಗೆ ಅನುಮತಿ ನೀಡಲು ಕೇಂದ್ರ ಸಚಿವ ಸಂಪುಟವು ತನ್ನ ಒಪ್ಪಿಗೆ ನೀಡಿದೆ.

ಜೈವಿಕ ಇಂಧನಗಳ ರಾಷ್ಟ್ರೀಯ ನೀತಿಯ ತಿದ್ದುಪಡಿಗಳು ಮೇಕ್–ಇನ್–ಇಂಡಿಯಾಗೆ ದಾರಿ ಮಾಡಿಕೊಡುವ ಸ್ಥಳೀಯ ತಂತ್ರಜ್ಞಾನಗಳ ಬೆಳವಣಿಗೆಗಳನ್ನು ಆಕರ್ಷಿಸುತ್ತದೆ ಮತ್ತು ಉತ್ತೇಜಿಸುತ್ತದೆ ಹಾಗೂ ಆ ಮೂಲಕ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

ಜೈವಿಕ ಇಂಧನಗಳ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ನೀತಿಯು 2018ರಲ್ಲಿ ಬಂದಿತು. ಈ ತಿದ್ದುಪಡಿ ಪ್ರಸ್ತಾವನೆಯು ಮೇಕ್–ಇನ್–ಇಂಡಿಯಾ ಚಾಲನೆಗೆ ದಾರಿ ಮಾಡಿಕೊಡುತ್ತದೆ. ಇದರಿಂದಾಗಿ ಹೆಚ್ಚು ಹೆಚ್ಚು ಜೈವಿಕ ಇಂಧನಗಳ ಉತ್ಪಾದನೆಯಿಂದ ಪೆಟ್ರೋಲಿಯಂ ಉತ್ಪನ್ನಗಳ ಆಮದು ಕಡಿಮೆಯಾಗಲು ಕಾರಣವಾಗುತ್ತದೆ ಎಂದು ಹೇಳಿಕೆ ತಿಳಿಸಿದೆ.

"ಜೈವಿಕ ಇಂಧನಗಳ ಉತ್ಪಾದನೆಗೆ ಹೆಚ್ಚಿನ ಫೀಡ್‌ಸ್ಟಾಕ್‌ಗಳನ್ನು ಅನುಮತಿಸಲಾಗಿರುವುದರಿಂದ, ಇದು ಆತ್ಮನಿರ್ಭರ ಭಾರತವನ್ನು ಉತ್ತೇಜಿಸುತ್ತದೆ ಮತ್ತು 2047ರ ವೇಳೆಗೆ ಭಾರತವು 'ಇಂಧನ ಸ್ವತಂತ್ರ' ಆಗುವ ಪ್ರಧಾನಮಂತ್ರಿಯ ದೃಷ್ಟಿಕೋನಕ್ಕೆ ಪ್ರಚೋದನೆಯನ್ನು ನೀಡುತ್ತದೆ" ಎಂದಿದೆ.

*1ನೇ ಪುಟದಿಂದ...*

## ಈ ವಸುಂಧರೆಯ ಋಣವನ್ನು...

ಮೂರನೆಯದು ಅತಿಮುಖ್ಯವಾದ ಅಂಶ ಮರಗಿಡಗಳನ್ನು ಬೆಳೆಸುವುದು. ಇದಂತೂ ನಮಗೆ ಮೇ, ಜೂನ್, ಜುಲೈಗಳಲ್ಲಿ ಹವ್ಯಾಸವಾಗಿಬಿಡಬೇಕು. ಕಾಲಿ ಬಿಟ್ಟ ಸ್ಥಳವನ್ನು ಗಿಡ ಮರಗಳಿಂದ ತುಂಬಬೇಕು. ಈ ಮುಂಗಾರಿನ ಸಮಯದಲ್ಲಿ ನಾಟಿ ಮಾಡುವ ಸಸಿಗಳಿಗೆ ವಿಶೇಷ ಆರೈಕೆಯೇ ಇಲ್ಲದೇ ಬೆಳೆಯುತ್ತವೆ. ರಸ್ತೆಗಳ ಪಕ್ಕ, ಉದ್ಯಾನವನಗಳಲ್ಲಿ, ಮನೆಯ ಮುಂದೆ ನಮಗೆ ಇಷ್ಟವಾದ ಪ್ರಾಣಿ ಪಕ್ಷಿಗಳಿಗೂ ಆಹಾರ ಕೊಡಬಲ್ಲ ಗಿಡ ಮರಗಳನ್ನು ಹೆಚ್ಚಾಗಿ ಬೆಳೆಸಬೇಕು. ಮೊದಲೆರೆಡು ವರ್ಷ ಸ್ವಲ್ಪ ಕಾಳಜಿವಹಿಸಿದರೆ, ಅವು ತಮ್ಮ ಜೀವಿತ ಕಾಲದ ಅಂತ್ಯದವರೆಗೆ ನಮ್ಮ ಶುದ್ಧ ಉಸಿರಿನ ಕಾಳಜಿ ವಹಿಸುತ್ತವೆ. ಕೃಷಿಕರು ಜಮೀನಿನ ಬದುವಿನಲ್ಲಿ, ಕೃಷಿ ಹೊಂಡದ ಮೇಲೆ, ಬೀಳು ಬಿಟ್ಟ ಜಮೀನಲ್ಲಿ, ಗೋಮಾಳ ದೇವಸ್ಥಾನದ ಆವರಣಗಳಲ್ಲಿ ದುಂಬಿ ಪಕ್ಷಿಗಳಿಗೆ ಆಹಾರವಾಗಬಲ್ಲ ಹೂ ಹಣ್ಣು ಬಿಡುವ ಮರಗಳನ್ನು ಬೆಳೆಸಿದರೆ, ಬೆಳೆಗಳಿಗೆ ತಗುಲುವ ಎಷ್ಟೋ ರೋಗಗಳಿಂದ ಮುಕ್ತಿ ಪಡೆಯಬಹುದು. ಮರಗಳಿದ್ದಲ್ಲಿ ಅಂತರ್ಜಲ ಮಟ್ಟವು ವೃದ್ಧಿಸುವುದು ಮತ್ತು ಹಣ್ಣು, ಹಂಪಲು, ಸೌದೆ, ಮೇವು, ಹಸಿರೆಲೆ ಗೊಬ್ಬರ ಈ ರೀತಿಯ ಅನೇಕ ಉಪಯೋಗಗಳು ಮರಗಳಿಂದಾಗುತ್ತವೆ. ನಾವು ಬೆಳೆಸುವ ಮರಗಿಡಗಳು ಭವಿಷ್ಯದ ಪೀಳಿಗೆಯ ನಿಜವಾದ ಜೀವವಿಮೆ ಇದ್ದಂತೆ.

ಒಣಭೂಮಿಯಲ್ಲಿಯೂ ಸಂತುಷ್ಟವಾಗಿ ಬೆಳೆಯಬಲ್ಲ, ಈ ಇಪ್ಪತ್ತೇಳು ಗಿಡಗಳನ್ನು ಒಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ನೆಟ್ಟು ಬೆಳೆಸಿದರೆ, ಮನುಷ್ಯ ನರಕಕ್ಕೇ ಹೋಗುವುದಿಲ್ಲ ಎನ್ನುವುದನ್ನ ಈ ಕೆಳಗಿನ ಶ್ಲೋಕ ಹೇಳುತ್ತದೆ.

ಅಶ್ವತ್ಥಮೇಕಂ ಪಿಚುಮಂದಮೇಕಂ
ನ್ಯಗ್ರೋಧಮೇಕಂ ದಶ ತಿಂತ್ರಿಣೀಕಮ್ ।

ಕಪಿತ್ಥ ಬಿಲ್ವಾಮಲಕೀ ತ್ರಯಂ ಚ
ಪಂಚಾಮ್ರರೋಪೀ ನರಕಂ ನ ಪಶ್ಯೇತ್ ॥

**ಅರ್ಥ:** ಒಂದು ಅಶ್ವತ್ಥವೃಕ್ಷ, ಒಂದು ಬೇವಿನಮರ, ಒಂದು ಆಲದಮರ, ಹತ್ತು ಹುಣಿಸೆಮರ, ಮೂರು ಮೂರು ಬೇಲ, ಬಿಲ್ವ, ನೆಲ್ಲಿ ಮರಗಳು ಮತ್ತು ಐದು ಮಾವಿನ ಮರಗಳು – ಇವಿಷ್ಟು ಗಿಡಗಳನ್ನು ನೆಟ್ಟು ಮರವಾಗಿ ಮಾಡಿದವ ನರಕವನ್ನು ನೋಡುವುದಿಲ್ಲ! ಎಂಬ ಉಲ್ಲೇಖವಿದೆ.

ಇದು ಮುಂಗಾರಿನ ಸಮಯವಾಗಿದ್ದು ಇದೇ ಸೂಕ್ತ ಸಮಯ ಇಂದೇ ಹತ್ತಿರದ ಅರಣ್ಯಇಲಾಖೆಗೆ ಭೇಟಿನೀಡಿ ಇಲ್ಲ ಹತ್ತಿರದ ನರ್ಸರಿಯಿಂದ ಸಸಿಗಳನ್ನುತಂದು ಸೂಕ್ತ ರೀತಿಯಲ್ಲಿ ನಾಟಿ ಮಾಡಿ ಪೋಷಿಸೋಣ ಮತ್ತೊಮ್ಮೆ ತಾಯಿ ಭಾರತಿ ಸೌಭಾಗ್ಯವತಿಯಾಗಿ ಗತವೈಭವವನ್ನ ಪಡೆದು ಫಲಪುಷ್ಪಗಳಿಂದ ಶೋಭಿಸುವಂತೆ ನೋಡಿಕೊಳ್ಳೋಣ.

## ಭಾರತೀಯ ಹತ್ತಿ ಮಂಡಳಿ ರಚನೆ ಘೋಷಿಸಿದ ಕೇಂದ್ರ



ಹತ್ತಿ ಮನುಷ್ಯ ಎಂದೇ ಖ್ಯಾತರಾದ ಸುರೇಶ್ ಭಾಯಿ ಕೋಟಕ್ ಅವರ ಅಧ್ಯಕ್ಷತೆಯಲ್ಲಿ ಕಾಟನ್ ಕೌನ್ಸಿಲ್ ಆಫ್ ಇಂಡಿಯಾ ರಚನೆಯನ್ನು ಕೇಂದ್ರ ಸರ್ಕಾರ ಇಂದು ಘೋಷಿಸಿದೆ. ಹತ್ತಿ ಮಂಡಳಿಯು ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಹತ್ತಿ ಸಂಶೋಧನಾ ಸಂಸ್ಥೆಯೊಂದಿಗೆ ಜವಳಿ, ಕೃಷಿ, ವಾಣಿಜ್ಯ ಮತ್ತು ಹಣಕಾಸು ಸಚಿವಾಲಯಗಳ ಪ್ರಾತಿನಿಧ್ಯವನ್ನು ಹೊಂದಿರುತ್ತದೆ. ಪ್ರಸ್ತಾವಿತ ಮಂಡಳಿಯ ಮೊದಲ ಸಭೆಯನ್ನು ಈ ತಿಂಗಳ 28ರಂದು ನಿಗದಿಪಡಿಸಲಾಗಿದೆ. ಈ ಕ್ಷೇತ್ರದಲ್ಲಿ ಸ್ಪಷ್ಟವಾದ ಸುಧಾರಣೆಯನ್ನು ತರಲು ಮಂಡಳಿ ಚರ್ಚೆ ನಡೆಸಲಿದೆ ಮತ್ತು ಇದಕ್ಕಾಗಿ ದೃಢವಾದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಿದೆ.ಕೇಂದ್ರ ಜವಳಿ ಸಚಿವ ಪಿಯೂಷ್ ಗೋಯಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಹತ್ತಿ ಮೌಲ್ಯ ಸರಪಳಿಯ ಮಧ್ಯಸ್ಥಗಾರರೊಂದಿಗಿನ ಸಭೆಯಲ್ಲಿ ಈ ಘೋಷಣೆ ಹೊರಬಿದ್ದಿದೆ.

ಹತ್ತಿ ಉತ್ಪಾದನೆಯು ದೇಶದಲ್ಲಿ ಅತಿದೊಡ್ಡ ಸವಾಲಾಗಿದೆ, ಇದರ ಪರಿಣಾಮವಾಗಿ ಹತ್ತಿ ಬೆಳೆಯುವ ಅತಿದೊಡ್ಡ ಪ್ರದೇಶದ ಹೊರತಾಗಿಯೂ ಕಡಿಮೆ ಹತ್ತಿ ಉತ್ಪಾದನೆಯಾಗುತ್ತಿದೆ ಎಂದು ಸಭೆಯಲ್ಲಿ ಸಚಿವರು ಹೇಳಿದ್ದಾರೆ. ಹತ್ತಿ ರೈತರ ಉತ್ಪಾದಕತೆಯನ್ನು ಸುಧಾರಿಸಲು ಉತ್ತಮ ಗುಣಮಟ್ಟದ ಬೀಜಗಳನ್ನು ಲಭ್ಯವಾಗುವಂತೆ ಮಾಡುವ ಅಗತ್ಯವನ್ನು ಒತ್ತಿ ಹೇಳಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.